**2ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ.**

**ಸಿ.ಸಿ ನಂಃ 629/2012**
**ಸಿಡಬ್ಲೂಃ 3 ಪಿಡಬ್ಲೂಃ 2**

**ಸಾಕ್ಷಿದಾರರ ಹೆಸರು** ಃ- ಗುರುಸಿದ್ದಪ್ಪಾ ಶಿವಮೂರ್ತಪ್ಪಾ ಗುಡುಗನಟ್ಟಿ
**ವಯಸ್ಸು** ಃ- 65 ವರ್ಷ
**ಉದ್ಯೋಗ** ಃ- ಒಕ್ಕಲುತನ
**ಸಾಕೀನ** ಃ- ಗೊಡಚಿನಮಲ್ಕಿ

**ದಿಃ 02-01-2020 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ ;**

ನಾನು ಸಹಿ ಮಾಡುತ್ತೇನೆ. ಈಗ ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇದ್ದು ಸದರಿ ದಾಖಲೆಯನ್ನು ನಿಪಿ 4 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-4-ಎ ಅಂತಾ ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ನಿಪಿ 4 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದ

ದಿಃ 03-02-2012 ರಂದು ಮಧ್ಯಾಹ್ನ 02.30 ಗಂಟೆ ಸುಮಾರಿಗೆ ಗೊಡಚಿನಮಲ್ಕಿ ಗ್ರಾಮದ ಕುರುಬರ ಓಣಿಯ ಪರಸಪ್ಪಾ ಗೋಟೂರು ಈತನ ಮನೆಯ ಸಮೀಪ ರಸ್ತೆಯ ಮೇಲೆ ಗೋಕಾಕ ಗ್ರಾಮೀಣಾ ಠಾಣಾ ಪೊಲೀಸರು ಕರೆಯಿಸಿ ನನ್ನ ಸಮಕ್ಷಮ ಚಾಸಾ 1 ರವರು ತೋರಿಸಿದಂತೆ ಗುನ್ನಾ ಸ್ಥಳದ ಪಂಚನಾಮೆಯನ್ನು ಮಧ್ಯಾಹ್ನ 02.30 ಗಂಟೆಯಿಂದ 03.15 ಗಂಟೆಯವರೆಗೆ ಜರುಗಿಸಿ, ಸ್ಥಳದಿಂದ 2 ಲಾಂಗಗಳನ್ನು ಜಪ್ತುಪಡಿಸಿಕೊಂಡು, ನಿಪಿ-4 ರ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,
ಸಹಿ/-
(ಮೋಹನ ಸದಾಶಿವ ಪೋಳ)
2ನೇ ಹೆ.ದಿ.&ನ್ಯಾ.ದಂ., ಗೋಕಾಕ.